ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
RAJIV GANDHI UNIVERSITY OF HEALTH SCIENCES, KARNATAKA, BENGALURU
4th T Block, Jayanagar, Bengaluru – 560 041

ಸಂಖ್ಯೆ. ಆರ್‌ಜಿಯು/ಪ್ರಾಧಿಕಾರ/165ನೇ ಸಿಂಡಿಕೇಟ್/109/2021–22 ದಿನಾಂಕ. 07.02.2022

# ಅಧಿಸೂಚನೆ

ವಿಷಯ: ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ವಿವಿಧ ಕೆಲಸ ಕಾರ್ಯಗಳಿಗೆ ಭೋದಕ ಸಿಬ್ಬಂದಿಗಳನ್ನು ಹಾಗೂ ವಿಶ್ವವಿದ್ಯಾಲಯದ ಶಾಸನಬದ್ಧ ಸಭೆ /ಸಮಿತಿಗಳಿಗೆ ಸದಸ್ಯರನ್ನು ನಿಯೋಜಿಸಿದ ಸಂದರ್ಭದಲ್ಲಿ ನೀಡುವ ಪ್ರಯಾಣ ಭತ್ಯೆ, ದಿನ ಭತ್ಯೆ ದರಗಳನ್ನು ಪರೀಕ್ಷಾ ಕಾರ್ಯಗಳಿಗೆ ನೀಡುವ ದರಗಳಂತೆ ನಿಗಧಿಪಡಿಸುವ ಬಗ್ಗೆ

ಉಲ್ಲೇಖ: 1) ದಿನಾಂಕ 11.01.2021ರ 73ನೇ ಆರ್ಥಿಕ ಸಮಿತಿ ಸಭೆಯ ನಡವಳಿ
2) ದಿನಾಂಕ 01.09.2021ರಂದು ನಡೆದ 77ನೇ ಹಣಕಾಸು ಸಭೆಯ ನಡವಳಿ
3) ದಿನಾಂಕ 25.11.2021ರಂದು ನಡೆದ 165ನೇ ಸಿಂಡಿಕೇಟ್ ಸಭೆಯ ನಡವಳಿ

* * *

ವಿಶ್ವವಿದ್ಯಾಲಯದಲ್ಲಿ ದಿನಾಂಕ 11.01.2021ರಂದು ನಡೆದ 73ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ವಿಶ್ವವಿದ್ಯಾಲಯದಿಂದ, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ವಿವಿಧ ಕೆಲಸ ಕಾರ್ಯಗಳಿಗೆ ಭೋದಕ ಸಿಬ್ಬಂದಿಗಳನ್ನು ಹಾಗೂ ವಿಶ್ವವಿದ್ಯಾಲಯದ ಶಾಸನಬದ್ಧ ಸಭೆ /ಸಮಿತಿಗಳಿಗೆ ಸದಸ್ಯರನ್ನು ನಿಯೋಜಿಸಿದ ಸಂದರ್ಭದಲ್ಲಿ ನೀಡುವ ಪ್ರಯಾಣ ಭತ್ಯೆ, ದಿನ ಭತ್ಯೆ ದರಗಳನ್ನು ಪರೀಕ್ಷಾ ಕಾರ್ಯಗಳಿಗೆ ನೀಡುವ ದರಗಳಂತೆ ನಿಗಧಿಪಡಿಸಲು ತೀರ್ಮಾನಿಸಲಾಗಿತ್ತು. ಆದರೆ, ಸದರಿ ಆದೇಶದಲ್ಲಿ ಸ್ವಷ್ಟತೆಯಿಲ್ಲದ ಕಾರಣ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ದರಗಳನ್ನು ಏಕರೂಪದಲ್ಲಿ ನಿಗಧಿಪಡಿಸುವ ಉದ್ದೇಶದಿಂದ ವಿಶ್ವವಿದ್ಯಾಲಯದಲ್ಲಿ ದಿನಾಂಕ 01.09.2021ರಂದು ನಡೆದ 77ನೇ ಹಣಕಾಸು ಸಭೆ ಹಾಗೂ ದಿನಾಂಕ 25.11.2021ರಂದು ನಡೆದ 165ನೇ ಸಿಂಡಿಕೇಟ್ ಸಭೆಯ ಅನುಮೋದನೆಯ ಮೇರೆಗೆ ವಿಶ್ವವಿದ್ಯಾಲಯದ ಅಧಿಕಾರಿಗಳು/ಸಿಬ್ಬಂದಿಗಳು, ವಿಶ್ವವಿದ್ಯಾಲಯದಲ್ಲಿ ನಿಯೋಜನೆಯ ಮೇರೆಗೆ

ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಹಾಗೂ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ/ಮೀನಿಯಲ್ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದಂತೆ, ವಿವಿಧ ಕೆಲಸ ಕಾರ್ಯಗಳಿಗೆ ನಿಯೋಜಿಸಲ್ಪಡುವವರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 1994, 35(2)ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಈ ಕೆಳಕಂಡಂತೆ ದರಗಳನ್ನು ಪರಿಷ್ಕರಿಸಲಾಗಿದೆ.

| | | *Existing* | *To be Revised* |
|---|---|---|---|
| | ***TRAVELLING ALLOWNACE*** | | |
| **1** | *to Examiners* | *Rs.10/- per KM* | ***Rs.10/- per KM*** |
| **2** | *to LIC Members* | *Rs.7.50 per KM* | ***Rs.10/- per KM*** |
| **3** | *to any other Meeting* | *Rs.7.50 per KM* | ***Rs.10/- per KM*** |
| | ***DEARNESS ALLOWANCE*** | | |
| **4** | ***to Examiners who are from Karnataka*** | | |
| | *Bangalore* | *Rs.1500/-* | ***Rs.1500/-*** |
| | *Other than Bangalore* ***to Examiners from Out of state*** | *Rs.900/-* | ***Rs.900/-*** |
| | *Bangalore* | *Rs.1700/-* | ***Rs.1700/-*** |
| | *Other than Bangalore* | *Rs.1100/-* | ***Rs.1100/-*** |
| **5** | ***DA to LIC Members if the Inspection is in*** | | |
| | *Bangalore* | *Rs.750/-* | ***Rs.1500/-*** |
| | *Other than Bangalore* | *Rs.450/-* | ***Rs.900/-*** |
| **6** | ***DA to any other Meeting in*** | | |
| | *Bangalore* | *Rs.500/-* | ***Rs.1500/-*** |
| | *Other than Bangalore* | ---------- | ***Rs.900/-*** |

| | | | |
|---|---|---|---|
| 7 | ***DA*** *Syndicate / Senate / FC /Planning Board/ Academic Council* ***Members if they attend any meeting*** | *Rs.3000/-* | ***Rs.3000/-*** |
| | ***SITTING FEE*** | | |
| 8 | *to Syndicate / Senate / FC /Planning Board/ Academic Council* ***Members if they attend any meeting*** | *Rs.5000/-* | ***Rs.5000/-*** |
| 9 | ***to DEANS if they attend Meeting conducted by Authority Section*** | *Rs.3000/-* | ***Rs.3000/-*** |
| 10 | ***to all other meetings***<br>*Bangalore and Other than Bangalore* | *Rs.1000/-* | ***Rs.1000/-*** |

*(ಗೌರವಾನ್ವಿತ ಕುಲಪತಿಯವರ ಅನುಮೋದಿತ)*

ಕುಲಸಚಿವರು

**ಗೆ**

ಹಣಕಾಸು ಅಧಿಕಾರಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ

**ಪ್ರತಿಗಳು : –**

1. ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನಸೌಧ, ಬೆಂಗಳೂರು
3. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಆಪ್ತ ಸಹಾಯಕರುಗಳು, ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ/ ಹಣಕಾಸು ಅಧಿಕಾರಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ, ಬೆಂಗಳೂರು.
6. ಕಛೇರಿ ಪ್ರತಿ.